1884ನೇ ಇಸವಿ ಅರ್ಜೀ ನಂಬರ್ 52.

ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ನರಸಮ್ಮ, ಮೃತಪಟ್ಟ ಸದರೀ ಚಿಕ್ಕಲಕ್ಕೇಗೌಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕುಣಿಗಲ್ ತಾಲ್ಲೂಕು ತವಸಂದ್ರ ಸ್ಥಳದ ನರಸಮ್ಮ, ಡಿಟೋ ವಾಸಸ್ಥರಾಗಿ ಮೃತಪಟ್ಟ ಚಿಕ್ಕಲಕ್ಕೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿಗೆ ಹಕ್ಕುದಾರರಾದ ವಿಪಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಅರ್ಜೀ ನಂಬರ್ 54.

ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಲಕ್ಕಣ್ಣ, ಮೃತಪಟ್ಟ ಸದರೀ ಚಿಕ್ಕಲಕ್ಕೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ಕುಣಿಗಲ್ ತಾಲ್ಲೂಕು ಯಾಚಗಟ್ಟ ಸ್ಥಳದ ಲಕ್ಕಣ್ಣ, ಡಿಟೋ ವಾಸಸ್ಥರಾಗಿ ಮೃತಪಟ್ಟ ಚಿಕ್ಕಲಕ್ಕೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಕಣ್ಣನ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕಲಕ್ಕೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 55.

ಮೃತಪಟ್ಟ ಶಿವಾಚಾರದ ದೇವೀರಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ನಂಜಮ್ಮ, ಮೃತಪಟ್ಟ ಸದರೀ ದೇವೀರಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಂತಾಮಣಿ ತಾಲ್ಲೂಕು ಇರಗಂಪಲ್ಲೆ ಸ್ಥಳದ ನಂಜಮ್ಮ, ಡಿಟೋ ವಾಸಸ್ಥನಾಗಿ ಮೃತಪಟ್ಟ ದೇವೀರಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 31ರಲ್ಲು ಬೆಂಗಳೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೀರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 13ರಲ್ಲು ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಆರ್. ಎ. ತಂಬುಚೆಟ್ಟ್ಯ,
ಡಿಸ್ಟ್ರಿಕ್ಟು ಜಡ್ಜ.

ತುಮಕೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 8–2.

ಮೃತಪಟ್ಟ ಮರಳೇಗವುಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರು 1ನೇ ಕೊಟ್ಟೂರಯ್ಯ, 2ನೇ ರಾಮಯ್ಯ 3ನೇ ಸಿದ್ದಯ್ಯ 4ನೇ ಚಿಕ್ಕಲಿಂಗಯ್ಯ 2–3–4ನೇ ಯವರು ಮೈನರ್ ಪೋಷಕ 1ನೇ ಕೊಟ್ಟೂರಯ್ಯ 5ನೇ ಮರುಳಸಿದ್ದೇಗವುಡ 6ನೇ ದೊಡ್ಡೇಗವುಡ ಮೈನರ್ ಪೋಷಕ 5ನೇ ಮರಳಸಿದ್ದೇಗವುಡ, ಇವರು ಮೃತಪ

ಟ್ಟ ಸದರೀ ಮರಳೀಗವುಡನಿಗೆ 5–6ನೇ ಯವರು ಅಂಣನ ಮಕ್ಕಳು 1–2–3–4ನೇ ಯವರು ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿಪಟೂರು ತಾ॥ ಬಳವನೇರ್ಲ ಫಿರಕಾ ಹೊಸೂರು ಸ್ಥಳದ 1–2–3–4–5–6ನೇ ಯವರು ಡಿಟೋ ಗ್ರಾಮ ವಾಸಸ್ಥನಾಗಿ ಮೃತಪಟ್ಟ ಮರಳೀಗವುಡನ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1–2–3–4–5–6ನೇ ಯವರುಗಳ ಅರ್ಜೀಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಳೀಗವುಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 11—3.

ಮೃತಪಟ್ಟ ನಂಜುಂಡಶೆಟ್ಟಿ ಯೆಂಬವನ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ನಂಜಯ್ಯ, 2ನೇ ಮರಳಯ್ಯ, 3ನೇ ಗುರುನಂಜಯ್ಯ, ಇವರಗಳು ಮೈನರ್ ಗಾರ್ಡಿಯರ್ ತಾಯಿ ಈರಮ್ಮ. ಮೃತಪಟ್ಟ ಸದರೀ ನಂಜುಂಡಶೆಟ್ಟಿ ಯೆಂಬವನಿಗೆ ಹೆಂಡತಿ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿಪಟೂರು ತಾಲ್ಲೂಕು ಸೂರನಹಳ್ಳಿ ಸ್ಥಳದ ಡಿಟೋ ಮೈನರ್‌ಗಳ ತಾಯಿ ಈರಮ್ಮ, ಡಿಟೋ ತಾಲ್ಲೂಕು ವೆಂಕಟಗಿರಿಯನಹಳ್ಳಿ ವಾಸಸ್ಥನಾಗಿ ಮೃತಪಟ್ಟ ನಂಜುಂಡಶೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾಳೆ.

ಸದರೀ ದರಖಾಸ್ತುದಾರಳಾದ ಈರಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಶೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1884ನೇ ಇಸವಿ ಫಿಬ್ರವರೀ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 27.

ಮೃತಪಟ್ಟ ಸುಬ್ಬರಾಯಶೆಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರು ರಾಮಕೃಷ್ಣಶೆಟ್ಟಿಯು, ಮೃತಪಟ್ಟ ಸದರೀ ಸುಬ್ಬರಾಯಶೆಟ್ಟಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಡತೊರೆ ತಾಲ್ಲೂಕು ಕೊಣನೂರು ಸ್ಥಳದ ಸದರೀ ರಾಮಕೃಷ್ಣಶೆಟ್ಟಿಯು, ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯಶೆಟ್ಟಿಯ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ರಾಮಕೃಷ್ಣಶೆಟ್ಟಿಯ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 28ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯಶೆಟ್ಟಿ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.